# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 63 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನ ಸಭೆಯಿಂದ ಚುನಾಯಿತರದವರು) |
| ಉತ್ತರಿಸಬೇಕಾದ ದಿನಾಂಕ | : | 15.02.2022 |
| ಉತ್ತರಿಸುವವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಕಲಚೇತನರಿಗೆ ನೀಡಲಾಗುವ ಯೂನಿಕ್ ಡಿಸೆಬಿಲಿಟಿ ಐಡೆಂಟಿಟಿ ಕಾರ್ಡ್ (ಯು.ಡಿ.ಐ.ಡಿ) ನೀಡಲು ಕೋರಿ ಒಟ್ಟು ಎಷ್ಟು ಅರ್ಜಿಗಳ 31.01.2021ರವರೆಗೆ ಸಲ್ಲಿಕೆಯಾಗಿದೆ; | ವಿಕಲಚೇತನರಿಗೆ ನೀಡಲಾಗುವ ಯೂನಿಕ್ ಡಿಸೆಬಿಲಿಟಿ ಐಡೆಂಟಿಟಿ ಕಾರ್ಡ್ (ಯು.ಡಿ.ಐ.ಡಿ) ಪೋರ್ಟಲ್‌ನಲ್ಲಿ **ದಿನಾಂಕ:31.01.2021ರ** ವರೆಗೆ ಒಟ್ಟು ಸ್ವೀಕೃತವಾಗಿರುವ ಅರ್ಜಿಗಳು ಸಂಖ್ಯೆ:**5,34,847** |
| ಆ) | ಈ ಅರ್ಜಿಗಳ ಪೈಕಿ ಎಷ್ಟು ಜನರಿಗೆ ಯು.ಡಿ.ಐ.ಡಿ ಕಾರ್ಡ್ ವಿತರಿಸಲಾಗಿದೆ; ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ ಮತ್ತು ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು; | • ಈ ಅರ್ಜಿಗಳ ಪೈಕಿ ವಿತರಿಸಲಾಗಿರುವ ಯು.ಡಿ.ಐ.ಡಿ ಕಾರ್ಡ್ ಅರ್ಜಿಗಳ ಸಂಖ್ಯೆ:**2,10,143**<br>• ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ: **29,575**<br>• **40% ಗಿಂತ ಕಡಿಮೆ ಅಂಗವೈಕಲ್ಯತೆ ಇರುವ ಕಾರ್ಡ್‌ಗಳು ( white bar UDID card) 1648**<br>• ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ: **2,93,661** |
| ಇ) | ಯು.ಡಿ.ಐ.ಡಿ ಕಾರ್ಡ್‌ಗಳನ್ನು ಅರ್ಹ ವಿಕಲಚೇತನರಿಗೆ ವಿತರಣೆ ಮಾಡುವಲ್ಲಿ ಮಧ್ಯವರ್ತಿಗಳ ಹಾವಳಿಯಿಂದಾಗಿ ವಿನಾಕಾರಣ ವಿಳಂಬವಾಗುತ್ತಿದ್ದು, ಅರ್ಹ ವ್ಯಕ್ತಿಗಳ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಈ ಯೋಜನೆಯು ಆನ್‌ಲೈನ್ ಮೂಲಕ ಸೇವೆ ಒದಗಿಸುತ್ತಿದ್ದು, ಫಲಾನುಭವಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜಿಲ್ಲಾ/ತಾಲ್ಲೂಕು ಆರೋಗ್ಯ ಕೇಂದ್ರಗಳಲ್ಲಿ ಯು.ಡಿ.ಐಡಿ ಕಾರ್ಡ್ ಪಡೆಯುವುದರಿಂದ ಯಾವುದೇ ಮಧ್ಯವರ್ತಿಗಳ ಹಾವಳಿಯಾಗುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. |
| ಈ) | ಬಂದಿದ್ದಲ್ಲಿ, ಅಂಗವೈಕಲ್ಯದ ಪ್ರಾಮಾಣಿಕರಣ ಮತ್ತು ಐಡಿ ಕಾರ್ಡ್ ವಿತರಣೆಯಲ್ಲಿ; ಯಾವುದೇ ರೀತಿ ಅಕ್ರಮಗಳು ನಡೆಯದಂತೆ ಮಾಡುವ ನಿಟ್ಟಿನಲ್ಲಿ ಸರ್ಕಾರದಿಂದ ಕೈಗೊಳ್ಳುತ್ತಿರುವ ಕ್ರಮಗಳೇನು? | ಅಂಗವೈಕಲ್ಯದ ಪ್ರಾಮಾಣಿಕರಣ ಮತ್ತು ಐಡಿ ಕಾರ್ಡ್ ವಿತರಣೆಯಲ್ಲಿ ಯಾವುದೇ ರೀತಿ ಅಕ್ರಮಗಳು ನಡೆಯದಂತೆ ಮಾಡುವ ನಿಟ್ಟಿನಲ್ಲಿ ಸರ್ಕಾರ ವಿಕಲಚೇತನರ ವಿಶಿಷ್ಟ ಗುರುತಿನ ಚೀಟಿ (UDID) ಕಾರ್ಡ್‌ಗಳನ್ನು ಆನ್‌ಲೈನ್ ಮೂಲಕ ಒದಗಿಸಲಾಗುತ್ತಿದೆ. |

**ಸಂಖ್ಯೆ: ಮಮಇ 47 ಪಿಹೆಚ್‌ಪಿ 2022**

Halappa BA

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು